**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಓ.ಎಸ್.ನಂಃ 114/2013**

**ಸಿ.ಡಬ್ಲ್ಯೂ- 1**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಜಯ್ ಕುಮಾರ್ |
| ತಂದೆಯ ಹೆಸರು | : | ಮಂಜೇಗೌಡ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ತಾಲ್ಲೂಕು ಸರ್ವೇಯರ್ ಮೈಸೂರು ಜಿಲ್ಲೆ. |
| ವಾಸಸ್ಥಳ | : | ಮೈಸೂರು . |

**ಸಾಕ್ಷಿಗೆ ದಿನಾಂಕಃ 13.10.2025 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಸ್.ಜಿ. ವಕೀಲರಿಂದ**

ನಾನು ಟಿ.ನರಸೀಪುರ ತಾಲ್ಲೂಕಿನಲ್ಲಿ 2013 ರಿಂದ 2024 ರವರೆಗೆ ವಿಷಯ ನಿರ್ವಾಹಕರು, ಅಭಿಲೇಖಾಲಯದಲ್ಲಿ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ. ಸರ್ವೆ ನಂ. 14/2 ರಲ್ಲಿ ಯರಗನಹಳ್ಳಿ ಗ್ರಾಮದಲ್ಲಿ ಅಳತೆ ಮಾಡಲು ನನಗೆ ನ್ಯಾಯಾಲಯದಿಂದ ಆದೇಶ ಬಂದಿರುತ್ತದೆ. ನಂತರ ನಾನು ವಾದಿ ಮತ್ತು ಪ್ರತಿವಾದಿಗಳಿಗೆ ಆರ್.ಪಿ.ಎ.ಡಿ ಮೂಲಕ ನೋಟಿಸ್ ನ್ನು ನೀಡಿರುತ್ತೇನೆ. ನೋಟಿಸ್ ಎಲ್ಲರಿಗೂ ಜಾರಿಯಾಗಿರುತ್ತದೆ. ದಿನಾಂಕ. 04.07.2022 ರಂದು ಬೆಳಿಗ್ಗೆ 11.00 ಗಂಟೆಗೆ ಸರ್ವೆ ನಂ.14/2 ನ್ನು ಅಳತೆ ಮಾಡಲು ಸ್ಥಳಕ್ಕೆ ಹೋಗಿರುತ್ತೇನೆ. ಅಳತೆ ಮಾಡುವ ಸಮಯದಲ್ಲಿ ವಾದಿ ಮತ್ತು 2 ಮತ್ತು 3 ನೇ ಪ್ರತಿವಾದಿಗಳು ಹಾಜರಿದ್ದು, 1 ನೇ ಪ್ರತಿವಾದಿಯ ಸಿಬ್ಬಂದಿಯವರು ಹಾಜರಿರಲಿಲ್ಲ. ಸರ್ವೆ ದಾಖಲೆಗಳ ಆಧಾರದ ಮೇಲೆ ಸರ್ವೆ ನಂ.14/2 ನ್ನು ಅಳತೆ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿದ ಸೂಚನಾ ಪತ್ರದ ಆಧಾರದ ಮೇಲೆ ಅಳತೆ ಕಾರ್ಯ ನಿರ್ವಹಿಸಿರುತ್ತೇನೆ.

ಸರ್ವೆ ನಂ.14/2 ರಲ್ಲಿ ಪೂರ್ವ - ಪಶ್ಚಿಮ 16 ಅಡಿ ಮತ್ತು ಉತ್ತರ - ದಕ್ಷಿಣ ಅಡಿ 31 ಅಡಿ ಒತ್ತುವರಿ ಮಾಡಿರುತ್ತಾರೆ. ಸದರಿ ಜಾಗದಲ್ಲಿ ಮಿಲ್ ನ್ನು 3 ನೇ ಪ್ರತಿವಾದಿ ನಿರ್ಮಿಸಿರುತ್ತಾರೆ. ಈ ಸಂಬಂಧ ನಾನು ವಾದಿ ಮತ್ತು 2 ಮತ್ತು 3 ನೇ ಪ್ರತಿವಾದಿಗಳ ಹೇಳಿಕೆಯನ್ನು ಪಡೆದಿರುತ್ತೇನೆ ಹಾಗೂ

3 ನೇ ಪ್ರತಿವಾದಿಯು ಹಾಜರಿದ್ದು ಸ್ಥಳ ಮಹಜರ್ ಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಮಹಜರ್ ಗೆ ವಾದಿ ಮತ್ತು 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಈ ಸಂಬಂಧ ನಾನು ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ಸರ್ವೆ ನಂಬರಿನಲ್ಲಿ ನೀರಿನ ತೊಂಬೆಯಿದ್ದು ಅದರ ವಿಸ್ತೀರ್ಣ ಪೂರ್ವ ಪಶ್ಚಿಮ 7 ¼ ಅಡಿ, ಉತ್ತರ ದಕ್ಷಿಣ 5 ¼ ಅಡಿ ಇರುತ್ತದೆ. ಈ ಸಂಬಂಧ ನಾನು ನ್ಯಾಯಾಲಯಕ್ಕೆ ವರದಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ತಾನು ಹಾಜರುಪಡಿಸಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು.

3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಅವಕಾಶವನ್ನು ಕೇಳಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ .**